ಆದಂಥ ನಷ್ಟಕ್ಕೆ ಪರಿಹಾರ ಬೇಕಾಗಿತ್ತು. ಮಾನ್ಯ ಕೃಷಿ ಸಚಿವರು ಲೋಕಸಭೆಯ ಚುನಾವಣೆಯ ಗಡಿಬಿಡಿಯಲ್ಲಿ ಇದ್ದರು. ಆ ಗಡಿಬಿಡಿಯಲ್ಲಿ ಆ ರೈತರ ಪರಿಸ್ಥಿತಿಯನ್ನು ವಿಚಾರಿಸಲು ಅವರಿಗೆ ಪುರುಸೊತ್ತು ಎಲ್ಲಿ ಇತ್ತು? ಅಲ್ಲಿಯ ರೈತ ಸತ್ತಿದ್ದಾನೆಯೋ ಅಥವಾ ಬದುಕಿದ್ದಾನೆಯೋ ಎಂದು ನೋಡುವುದಕ್ಕೆ ಅವರಿಗೆ ಪುರುಸೊತ್ತು ಎಲ್ಲಿ ಇತ್ತು?

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನೀವು ಚುನಾವಣೆಯಲ್ಲಿ ವಿಜಯಶಾಲಿಗಳಾದವರು ಹಸನ್ಮುಖಿಗಳಾಗಿರಬೇಕು. ನೀವು ಈಗಲೂ ಸಿಟ್ಟಾಗಿ ಇದ್ದರೆ ಹೇಗೆ? ಅವರು ಸೋತವರು. ಆದ್ದರಿಂದ ಅವರು ಸಿಟ್ಟಾಗಿ ಇರಬೇಕು. It is being taken up by way of an Adjournment Motion. They have given notice under Rules 60. The procedure of the House is, immediately after the Question Hour, it will be taken up. So it is for the Government to make the arrangement appropriately. So we will take up the Question Hour.

(2) ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಕಂದಾಯ ಇಲಾಖೆಯ ಗ್ರಾಮ ಸಹಾಯಕರ ಬೇಡಿಕೆಗಳು.

1 (185)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯ ಗ್ರಾಮ ಸಹಾಯಕ ನೌಕರರು ತಮ್ಮ ಬೇಡಿಕೆಯನ್ನು ಮುಂದಿಟ್ಟು ಉಪವಾಸ ಸತ್ಯಾಗ್ರಹ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಈ ನೌಕರರ ಬೇಡಿಕೆಯನ್ನು ಈಡೇರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಈ ವಿಷಯವನ್ನು ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಿತವ್ಯಯಕ್ಕೆ ಸಂಬಂಧಿಸಿದಂತೆ ರಚಿಸಿರುವ ಸಚಿವ ಸಂಪುಟದ ಉಪ ಸಮಿತಿ ಹಾಗೂ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇದೇ ತರಹ ಇನ್ನಿತರ ಇಲಾಖೆಗಳಲ್ಲಿ ನಿಗದಿತ ವೇತನದಡಿ ಕೆಲಸ ನಿರ್ವಹಿಸುತ್ತಿರುವವರ ಸೇವೆಯನ್ನು ಕ್ರಮಬದ್ಧಗೊಳಿಸುವ ಬಗ್ಗೆ ಪರಿಶೀಲಿಸಲು ರಚಿಸಿರುವ ಸಮಿತಿಯು ಪರಿಶೀಲಿಸುತ್ತಿದೆ. ಅದಲ್ಲದೇ ಈ ವಿಷಯದ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿ ಅರ್ಜಿ ಕೂಡ ಬಾಕಿಯಿದೆ.

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಅಧ್ಯಕ್ಷರೇ, ನಾನು ಕಂದಾಯ ಇಲಾಖೆಯ ಗ್ರಾಮ ಸಹಾಯಕ ನೌಕರರ ಬೇಡಿಕೆಯ ಬಗ್ಗೆ ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿರುವುದರಲ್ಲಿ ಇದರ ಬಗ್ಗೆ ಒಂದು ಉಪ ಸಮಿತಿಯನ್ನು ಮಾಡಲಾಗಿದೆ, ಆ ಸಮಿತಿಯ ವರದಿಯನ್ನು ಕಾಯುತ್ತಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ 5.12.1996ರಂದು ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಪಿನಂತೆ 6 ತಿಂಗಳುಗಳೊಳಗೆ ಸೇವಾ ನಿಯಮವನ್ನು ರಚಿಸಿ, ಅಲ್ಲಿಯವರೆಗೆ ಅವರಿಗೆ ತಿಂಗಳೊಂದಕ್ಕೆ 900 ರೂಪಾಯಿಗಳ ಸಂಬಳ ಪಾವತಿ ಮಾಡಬೇಕೆಂದು ಸರ್ಕಾರಕ್ಕೆ ಆಜ್ಞೆಯನ್ನು ಕೊಟ್ಟರೂ ಸಹಿತ ಇದರ ಬಗ್ಗೆ ಸರ್ಕಾರ ಏನೂ ಕ್ರಮವನ್ನು ಕೈಗೊಂಡಿಲ್ಲ, ಇದಕ್ಕೆ ಕಾರಣವೇನು? ಮೊನ್ನೆಯ ದಿವಸ ಅಂದರೆ 24.11.1997ರಂದು ಅವರು ಅನಿರ್ಧಿಷ್ಟ ಕಾಲ ಉಪವಾಸ ಸತ್ಯಾಗ್ರಹವನ್ನು ಮಾಡುವಂತಹ ಸಂದರ್ಭದಲ್ಲಿ ಸುಮಾರು 53 ಜನ ಸಿಬ್ಬಂದಿ ವರ್ಗದವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಹಾಗೂ 5 ಜನರು ಮೃತ ಪಟ್ಟಿದ್ದಾರೆ. ಇದರಲ್ಲಿ ಬೀದರ್‌ನಲ್ಲಿ ಒಬ್ಬರು, ಬೆಂಗಳೂರಿನಲ್ಲಿ ಒಬ್ಬರು ಕೆ.ಆರ್.ನಗರದಲ್ಲಿ ಒಬ್ಬರು ಗುಲ್ಬರ್ಗಾದಲ್ಲಿ ಒಬ್ಬರು ಮಂಗಳೂರಿನಲ್ಲಿ ಒಬ್ಬರು ಹೀಗೆ ಈ ಐದು ಜನ ಮೃತಪಟ್ಟವರ ಕುಟುಂಬ ವರ್ಗದವರಿಗೆ ಪರಿಹಾರದ ವ್ಯವಸ್ಥೆಯನ್ನು ಸರ್ಕಾರದವರು ಏನು ಮಾಡಿದ್ದಾರೆ? ಇದರ ಬಗ್ಗೆ ತಿಳಿಸಬೇಕು. ಹಾಗೂ ಇಲ್ಲಿಯವರೆಗೆ ರಾಜ್ಯ ಸರ್ಕಾರ 10 ವರ್ಷ ಸೇವೆ ಸಲ್ಲಿಸಿದಂತಹ ದಿನಗೂಲಿ ನೌಕರರಿಗೆ, ಸ್ಟೆಫಂಡರಿ ಪದವೀಧರರಿಗೆ, ಅರೆಕಾಲಿಕ ಉಪನ್ಯಾಸಕರಿಗೆ, ಸ್ಥಳೀಯ ಅಭ್ಯರ್ಥಿಗಳಿಗೆ ಹಂಗಾಮಿ ನೌಕರರಿಗೆ, ಬೇರೆ ಬೇರೆ ಹಂತಗಳಲ್ಲಿ ನೀವು ಸಹಾಯ ಮಾಡಿದ್ದೀರಿ, ಆದರೆ ಈ 10,450 ಜನ ಗ್ರಾಮ ಸೇವಕರು ನಿಮಗೆ ಏನು ಅನ್ಯಾಯ ಮಾಡಿದ್ದಾರೆ? ನಿಮ್ಮ ಸರ್ಕಾರ ಸಾಯುತ್ತಿರುವಂತಹ ಸಂದರ್ಭದಲ್ಲಿ ನೀವು ಅವರನ್ನು ಏಕೆ ಸಾಯಿಸುತ್ತಿದ್ದೀರಿ? ದಯಮಾಡಿ ಇದಕ್ಕೆ ಸರ್ಕಾರ ಉತ್ತರವನ್ನು ಕೊಡಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಇನಾಂ ಅಬಾಲಿಷನ್, ವಿಲೇಜ್ ಆಫೀಸರ್ಸ್ ಅಬಾಲಿಷನ್ ಆ್ಯಕ್ಟ್ ಬಂದು ಈ ಗ್ರಾಮ ನೌಕರರನ್ನು ತೆಗೆದು ಹಾಕಿರುವಂಥದ್ದು. ಆವತ್ತಿನ ದಿವಸ ತೋಟಿ, ತಲವಾರರು, ನೀರುಗಂಟಿ ಶ್ಯಾನುಭೋಗರು ಇವರುಗಳನ್ನು ತೆಗೆದು ಹಾಕಿರುವುಂಥದ್ದು. 1978ರಲ್ಲಿ ನಾವು

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಗ್ರಾಮ ಸೇವಕರನ್ನು ನೇಮಕ ಮಾಡಿಕೊಳ್ಳಬೇಕೆಂದು ಹೇಳಿ ರಾಜ್ಯದಲ್ಲಿ 10,450 ಜನರನ್ನು ನೇಮಕ ಮಾಡಿಕೊಂಡು ಅವರಿಗೆ ಫಿಕ್ಸೆಡ್ ರೆಮ್ಯುನರೇಷನ್ ಎಂದು ಹೇಳಿ ಸಂಬಳವನ್ನು ಕೊಡುವಂಥದ್ದು. ತಾವು ಹೇಳಿದ ರೀತಿಯಲ್ಲಿ ಅವರಿಗೆ ಸಂಬಳವನ್ನು ಕೊಡುವಂಥದ್ದು ಅಲ್ಲ. ಅವರನ್ನು ದಿನಗೂಲಿ ನೌಕರರನ್ನಾಗಿ ತೆಗೆದುಕೊಂಡಿಲ್ಲ. ಅಂಗನವಾಡಿ ನೌಕರರನ್ನು ತೆಗೆದುಕೊಂಡಿದ್ದೇವೆ. ಅವರಿಗೆ ಗೌರವ ಧನವನ್ನು ಕೊಡುತ್ತೇವೆ. ಆದುದರಿಂದ ಬೇರೆ ಬೇರೆ ವ್ಯಾಖ್ಯಾನ ಇದೆ. ಇವರಿಗೆ ಫಿಕ್ಸೆಡ್ ರೆಮ್ಯೂನರೇಷನ್ ಎಂದು ತಿಂಗಳಿಗೆ 100 ರೂಪಾಯಿಗಳನ್ನು ಕೊಡುತ್ತಿದ್ದೆವು, ಆದರೆ ಇವತ್ತಿನ ದಿವಸ ಅವರಿಗೆ 900 ರೂಪಾಯಿಗಳನ್ನು ನಮ್ಮ ಸರ್ಕಾರ ಕೊಡುತ್ತಿದ್ದೇವೆ. ಗ್ರಾಮ ಸಹಾಯಕ ನೌಕರರ ಸಂಘದವರು ಸರ್ಕಾರವನ್ನು, ನಮ್ಮನ್ನು ಖಾಯಂ ನೌಕರರನ್ನಾಗಿ ಮಾಡಿ, ಸಕ್ರಮಗೊಳಿಸಿ ಎಂದು ಒತ್ತಾಯವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಚರ್ಚೆಯಾಗಿದೆ. ಅವರನ್ನು ನಿಯಮಾವಳಿಯ ಪ್ರಕಾರವಾಗಿ ಖಾಯಂಗೊಳಿಸಲು ಸಾಧ್ಯವಿಲ್ಲವೆಂದು ಹೇಳಿ ಒಂದು ಉಪ ಸಮಿತಿಯನ್ನೂ ಕೂಡ ಮಾಡಲಾಗಿದೆ. ಇವರನ್ನು ಖಾಯಂಗೊಳಿಸಲು ಸಾಧ್ಯವಾಗುವುದಿಲ್ಲ. ಈ ನೌಕರರಲ್ಲಿ 25 ವರ್ಷದವರಿಂದ ಹಿಡಿದು 65 ವರ್ಷವಾಗಿರತಕ್ಕಂತಹ ನೌಕರರೂ ಸಹ ಇದ್ದಾರೆ. ಇವರುಗಳನ್ನು ನೇಮಕ ಮಾಡಿಕೊಳ್ಳುವಾಗ ಯಾವ ನಿಯಮಾವಳಿಗಳನ್ನೂ ಸಹ ಪಾಲಿಸಿಲ್ಲ. ಕರ್ನಾಟಕ ನ್ಯಾಯ ಮಂಡಲಿಯಲ್ಲಿ ಪ್ರಶ್ನಿಸಿರುವುದಕ್ಕೆ ಅವರೂ ಕೂಡ ಸಕ್ರಮಗೊಳಿಸುವುದಕ್ಕೆ ನಿಯಮಾವಳಿಗಳನ್ನು ಮಾಡಿ ಎಂದು ಹೇಳಿದ್ದಾರೆ. ಅವರು ಹೇಳಿದ ಪ್ರಕಾರವಾಗಿ ನಮ್ಮ ಸರ್ಕಾರದವರು ಅವರಿಗೆ 900 ರೂಪಾಯಿಗಳ ಫಿಕ್ಸೆಡ್ ಮನಿಯನ್ನು ಕೊಡುತ್ತಿದ್ದೇವೆ. ಈ ಮಧ್ಯದಲ್ಲಿ ಆ ಸಂಘದ ಅಧ್ಯಕ್ಷನಾದ ಶ್ರೀ ಭಾಸ್ಕರಗೌಡ ಎಂಬುವರು ಕರ್ನಾಟಕ ನ್ಯಾಯ ಮಂಡಲಿಯಲ್ಲಿ ರಿಟ್‌ನ್ನು ಹಾಕಿಕೊಂಡಮೇಲೆ ಅದು ನಮ್ಮ ಸರ್ಕಾರಕ್ಕೆ ಬಂದು ಅದರಲ್ಲಿ 900 ರೂಪಾಯಿಗಳನ್ನು ಕೊಟ್ಟ ಮೇಲೆ ಇವರನ್ನು ಸಕ್ರಮಗೊಳಿಸಿಲ್ಲವೆಂದು ಹೇಳಿ ಒಂದು ಕಂಟೆಂಪ್ಟ್ ಪ್ರೊಸೀಡಿಂಗ್ಸ್ ಇನಿಷಿಯೇಟ್ ಮಾಡಿದ್ದಾರೆ. ಇದರ ವಿರುದ್ಧವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಕಂಟೆಂಪ್ಟ್ ಪ್ರೊಸೀಡಿಂಗ್ಸ್‌ಗೆ ನಾವು ಸ್ಟೇಯನ್ನು ತೆಗೆದುಕೊಂಡಿದ್ದೇವೆ. ಇದರ ಮಧ್ಯದಲ್ಲಿಯೇ ನಮ್ಮ ಉಪ ಮುಖ್ಯ-ಮಂತ್ರಿಗಳಾದ ಹಾಗೂ ಹಣಕಾಸಿನ ಸಚಿವರೂ ಸಹ ಆದ ಅವರ ನೇತೃತ್ವದಲ್ಲಿ ಒಂದು ಉಪ ಸಮಿತಿಯನ್ನು ಮಾಡಿ, ಇಡೀ ರಾಜ್ಯದಲ್ಲಿ ಎಷ್ಟು ಜನ ನೌಕರರು ಈ ರೀತಿಯಾಗಿದ್ದಾರೆ, ಅವರಿಗೆ ಯಾವ ರೀತಿಯಾಗಿ ಸಂಬಳವನ್ನು ಕೊಡಬೇಕು, ಏನು ವ್ಯವಸ್ಥೆಯನ್ನು ಮಾಡಬೇಕೆಂದು ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಂಡು ಮುಂದೆ ಮಾಡಿಕೊಡುತ್ತೇವೆ.

ಶ್ರೀ ಕೆ.ಜಯರಾಮ್‌ಶೆಟ್ಟಿ: ತಮ್ಮ ಸರ್ಕಾರ ಕಳೆದ ಅಧಿವೇಶನದಲ್ಲಿ ಇವರುಗಳನ್ನು ಖಾಯಂ ಮಾಡುತ್ತಿದ್ದೇವೆ, ಸಂಬಳವನ್ನು ಕೊಡುತ್ತೇವೆಂದು ಭರವಸೆಯನ್ನು

ಕೊಟ್ಟಿದ್ದೀರಿ, ಆದರೆ ಇದುವರೆಗೂ ಮಾಡಿಲ್ಲ. ಮೊನ್ನೆಯ ದಿವಸ ಅಂದರೆ ಚುನಾವಣೆಯು ನಡೆಯುವ ಮುನ್ನ ಆ ನೌಕರರನ್ನು ಕಂಡು ತಮ್ಮ ಸರ್ಕಾರದವರು ಅವರ ಜೊತೆಯಲ್ಲಿ ಮಾತನಾಡಿದ್ದೀರಿ. ಇದಕ್ಕೆ ಏನು ಟೈಮ್ ಬೌಂಡ್?

ಶ್ರೀ ಬಿ.ಎನ್.ಬಚ್ಚೇಗೌಡ: ಖಾಯಂ ಮಾಡುವಂತಹ ಪ್ರಶ್ನೆಯೇ ಇಲ್ಲ, ಅದಕ್ಕೆ ಸಾಕಷ್ಟು ನಿಯಮಾವಳಿಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ಸಿ ಅಂಡ್ ಆರ್ ರೂಲ್ಸ್ ಎಲ್ಲಾ ಅಪ್ಲೈಯಾಗುತ್ತದೆ. ಸರ್ಕಾರಿ ನೌಕರರು ಎಂದು ತೆಗೆದುಕೊಳ್ಳಬೇಕಾದರೆ ಅವರಿಗೆ ಲೀವ್‌ನ್ನು ಕೊಡಬೇಕಾಗುತ್ತದೆ, ಪಿ.ಎಫ್. ಇನ್ನು ಅನೇ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ಇವುಗಳನ್ನು ಕೊಡಬೇಕಾದರೆ ಸರ್ಕಾರಕ್ಕೆ ಆರ್ಥಿಕ ಹೊರೆಯು ಬೀಳುತ್ತದೆ. ಈ ದೃಷ್ಟಿಯಿಂದ ಬೇರೆ ಬೇರೆ ಇಲಾಖೆಯಲ್ಲಿ ಹೆಚ್ಚುವರಿಯಾಗಿ ಇರತಕ್ಕಂತಹ ನೌಕರರನ್ನೂ ಕೂಡ ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆಯು ಇದೆ. ಈಗ 900 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹೆಚ್ಚಿಗೆ ಕೊಡುವುದಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ಆಗಬೇಕು, ಮತ್ತು ನಮ್ಮ ಉಪ ಮುಖ್ಯ-ಮಂತ್ರಿಗಳ ಸಮಿತಿಯ ತೀರ್ಮಾನವೂ ಕೂಡ ಆಗಬೇಕು. ಅದಾದನಂತರ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಅಲ್ಲಿಯವರೆಗೆ ಅವರು 900 ರೂಪಾಯಿಗಳಿಗೆ ಕೆಲಸವನ್ನು ಮಾಡುತ್ತಿರಬೇಕು.

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಅಧ್ಯಕ್ಷರೇ, ಆ ನೌಕರರಿಗೆ ಸರ್ಕಾರದವರು 900 ರೂಪಾಯಿಗಳ ಸಂಬಳವನ್ನೂ ಸಹ ಕೊಡುತ್ತಿಲ್ಲ. ಪಟೇಲರು ಮತ್ತು ಉಗ್ರಾಣಿಗಳು ಇರುವಂತಹ ಸಂದರ್ಭದಲ್ಲಿ, ಆಗ ವಿದ್ಯಾಭ್ಯಾಸದ ಅರ್ಹತೆಯನ್ನು ತೆಗೆದುಕೊಳ್ಳಲಿಲ್ಲ. ಈಗ ಇಡೀ ರಾಜ್ಯದಲ್ಲಿ ಕೇವಲ 10,450 ಜನ ಈ ರೀತಿಯ ನೌಕರರು ಇದ್ದಾರೆ. ಅವರನ್ನು ಖಾಯಂ ಗೊಳಿಸುವುದಕ್ಕೆ ಸರ್ಕಾರಕ್ಕೆ ತೊಂದರೆ ಏನು ಇದೆ?

ಅಧ್ಯಕ್ಷರು: ಅವರನ್ನು ಖಾಯಂ ಮಾಡಿದರೆ ಅವರಿಗೆ ದುಡ್ಡನ್ನು ಕೊಡಬೇಕು, ಸುಮ್ಮನೆ ಖಾಯಂ ಮಾಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಖಾಯಂ ಮಾಡಿಬಿಟ್ಟರೆ ರಾಜಕೀಯವನ್ನು ಮಾಡಿಬಿಡುತ್ತಾರೆ.

ಶ್ರೀ ಕೆ.ಜಯರಾಮಶೆಟ್ಟಿ: ಅವರು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶ್ರೀ ಕೆ.ರುಕ್ಮಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೇ, ಅವರು ಸೇವೆಯನ್ನು ಮಾಡುತ್ತಿದ್ದಾರೆ, ಅದನ್ನು ಉಳಿಸಿಕೊಳ್ಳಬೇಕಲ್ಲಾ.

ಅಧ್ಯಕ್ಷರು: ಈಗಲೇ ಸರ್ಕಾರದ ಆದಾಯದಲ್ಲಿ 67 ಪರ್ಸೆಂಟ್ ಏನೋ ಸರ್ಕಾರಿ ನೌಕರರಿಗೆ ವೆಚ್ಚವಾಗುತ್ತಿದೆ.

ಶ್ರೀ ರುಕ್ಮಯ್ಯ ಪೂಜಾರಿ: ಮೃತಪಟ್ಟ ಕುಟುಂಬದವರಿಗೆ ಏನು ಮಾಡುತ್ತಿದ್ದೀರಿ?

ಅಧ್ಯಕ್ಷರು: ಟ್ರೆಜರಿ ಎಲ್ಲವನ್ನೂ ಅವರಿಗೇ ಕೊಟ್ಟುಬಿಟ್ಟರೆ ಚೆನ್ನಾಗಿ ಇರುತ್ತದೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ಉಪವಾಸ ಸತ್ಯಾಗ್ರಹ ಮಾಡಿದರು, ಪ್ರಾಣವನ್ನು ಕಳೆದುಕೊಂಡರು ಅವರ ಬಗ್ಗೆ ಈ ಸರ್ಕಾರಕ್ಕೆ ಯಾವುದೇ ಕಳಕಳಿಯೂ ಇಲ್ಲ ಎಂದರೆ ಹೇಗೆ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರು ಎತ್ತಿರತಕ್ಕಂತಹ ಪ್ರಶ್ನೆಗೆ ಪೂರ್ವಕವಾಗಿ, ಇದು ನಿಜಕ್ಕೂ ಕೂಡ ದುರಾದೃಷ್ಟವಾದಂಥದ್ದು. ಸುಮಾರು 20 ವರ್ಷಗಳಿಂದ ಈ ನೌಕರರುಗಳು ಕೆಲಸವನ್ನು ಮಾಡುತ್ತಿದ್ದಾರೆ. ನಾವು ಸಬೂಬು ಹೇಳಬಹುದು. ನಮ್ಮ ಮಾಜಿ ಮಂತ್ರಿಗಳಾದ ಶ್ರೀ ರಮೇಶ್ ಜಿಗಜಿಣಗಿಯವರು ಮೂರು ವರ್ಷದಲ್ಲಿ ಹತ್ತು ಸಾರಿ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಈಗ ಮಾನ್ಯ ಕಂದಾಯ ಸಚಿವರು ಅವರನ್ನು ಖಾಯಂಗೊಳಿಸುವುದು ಕಷ್ಟವೆಂದು ಹೇಳುತ್ತಿದ್ದಾರೆ. ಉಪ ಸಮಿತಿಯನ್ನು ರಚಿಸಲಾಗಿದೆ ಅದೂ ಕೂಡ ವರದಿಯನ್ನು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಇದರಲ್ಲಿರತಕ್ಕಂಥವರಲ್ಲಿ ಜಾಸ್ತಿಯಾಗಿ ದಲಿತರೇ ಇದ್ದಾರೆ. ಸುಮಾರು 10,450 ಜನರಲ್ಲಿ ಸುಮಾರು 9,000 ಅವರೇ ಇರಬಹುದು. ಈಗ ತಾವು ದಯವಿಟ್ಟು ಒಂದು ಕೆಲಸವನ್ನು ಮಾಡಿ. ಅವರಿಗೆ ಯಾವ ಅನುಕಂಪವನ್ನು ಸಹ ತೋರಿಸಬೇಡಿ. ಅವರನ್ನು ಕೆಲಸದಿಂದ ತೆಗೆದುಹಾಕಿಬಿಡಿ. ಅವರು 20 ವರ್ಷಗಳಿಂದ ಇವರುಗಳು ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಉಪನ್ಯಾಸಕರು ಇವರುಗಳನ್ನು ನೇಮಕಮಾಡಿಕೊಂಡು ಖಾಯಂ ಮಾಡಿದ್ದೇವೆ. ಇವರನ್ನು ಇವತ್ತು ನೇಮಕಮಾಡಿಕೊಳ್ಳುವುದಕ್ಕೆ ಆಗುವುದಿಲ್ಲವೇ? ದಯಮಾಡಿ ಅವರನ್ನು ತೆಗೆದುಬಿಡಿ. ಅವರು ಆಸೆಯನ್ನು ಇಟ್ಟುಕೊಂಡು ಇವತ್ತು ಆತ್ಮಹತ್ಯೆಯನ್ನು ಮಾಡಿಕೊಳ್ಳುವವರಾಗಿದ್ದಾರೆ. ನಾವು ಅಲ್ಲಿಗೆ ಹೋದರೆ ನಮ್ಮನ್ನು ಅವರು ಬಿಡುವುದಿಲ್ಲ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಸರಿಯಾಗಿ ಉತ್ತರವನ್ನು ಕೊಡಬೇಕು. ಅವರನ್ನು ಖಾಯಂ ಮಾಡಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ಅಡಿಷನಲ್ ಚೀಫ್ ಸೆಕ್ರೆಟರಿಯವರಿಂದ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಇದೇ ರೀತಿಯಾಗಿ ಬೇರೆ ಬೇರೆ ಇಲಾಖೆಯಲ್ಲಿರತಕ್ಕಂತಹ ನೌಕರರಿಗೆ ಯಾವ ರೀತಿಯಲ್ಲಿ ಸೇವೆಯನ್ನು ಸಕ್ರಮಗೊಳಿಸಬೇಕೆಂದು, ಅವರದ್ದು ಒಂದು ವರದಿಯು ಬೇಕೆಂದು ನಾವು ಕಾಯುತ್ತಿದ್ದೇವೆ. ಇವತ್ತು ಉಪ ಮುಖ್ಯ ಮಂತ್ರಿಗಳು ಒಂದು ವರದಿಯನ್ನು ಕೊಡಬೇಕು. ಇದು ಆರ್ಥಿಕವಾಗಿ ಸರ್ಕಾರದ ಮೇಲೆ ಹೊರೆಯು ಬೀಳುತ್ತದೆ. ಅವರು 20 ವರ್ಷಗಳಿಂದ ಸೇವೆಯನ್ನು ಮಾಡುತ್ತಿರುವುದನ್ನು ಒಪ್ಪಿಕೊಳ್ಳುತ್ತೇನೆ. ಅವರನ್ನು ಸಕ್ರಮಗೊಳಿಸಬೇಕಾದರೆ ಸಾಕಷ್ಟು ನಿಯಮಾವಳಿಗಳನ್ನು ಮಾಡಬೇಕಾಗುತ್ತದೆ. ಅವರನ್ನು ಹಾಗೆಯೇ ಮುಂದುವರೆಸಿಕೊಂಡು ಬಂದಿದ್ದೇವೆ. ಇವೆಲ್ಲಾ ವರದಿಗಳು

ಬಂದ ನಂತರ ಇದನ್ನು ಪರಿಶೀಲಿಸಲಾಗುವುದು.

INCREASE IN QUOTA OF FOODGRAINS TO CARD HOLDERS

2(49)

SRI H.C.BALAKRISHNA (Magadi): Will the Hon'ble Minister for Food and Civil Supplies be pleased to state?

a) Whether it has come to the notice of Government that the Food and Civil Supplies System is not functioning properly;

b) Whether the Government is planning to enhance the quota of foodgrains to the card holders as the present quota is not sufficient;

c) What is the reason for reducing the quantity of kerosene to Urban and Rural ration card holders (to be furnished the scale of issue).

d) Has it come to the notice of Government due to reduction in the quantity of kerosene the urban people and rural farmers are affected adversely what action Government has taken to increase the quantity;

e) When will green card issued to the poor in the State?

Sri G.Basavannappa (Minister for Food & Civil Supplies):

a) No. However, whenever instances of irregular supply or any other lapses are reported prompt action is being taken.

b) As the Central Government have released addtionlal